ಜೂಜಾಟದಲ್ಲಿ ತೊಡಗಿದ್ದ ಎಂಟು ಜನರ ಬಂಧನ

ಮಿಡಿಗೇಶಿ: ಜೂಜು ಕೇಂದ್ರದ ಮೇಲೆ ದಾಳಿ ನಡೆಸಿ ಜೂಜುಕೋರರನ್ನು ಬಂಧಿಸಿರುವ ಘಟನೆ ನಡೆದಿದೆ.

ಮಧುಗಿರಿ ತಾಲ್ಲೂಕಿನ ದೊಡ್ಡೇರಿ ಹೋಬಳಿಯ ಬಡವನಹಳ್ಳಿ ಪೊಲೀಸ್ ಠಾಣಾ ಸರಹದ್ದಿನ ರಂಟವಳಲು ಗ್ರಾಮದಲ್ಲಿ ಜೂಜಾಟ ಬೆಳಗಿನಿಂದಲೇ ನಡೆಯುತ್ತಿದೆ ಎಂಬ ಸಾರ್ವಜನಿಕರ ಪ್ರಜ್ಞಾವಂತ ನಾಗರಿಕರು ಹಾಗೂ ಸ್ತ್ರೀಶಕ್ತಿ, ಸ್ವಶಕ್ತಿ ಸಂಘಗಳ ಪದಾಧಿಕಾರಿಗಳವರು ನೇರವಾಗಿ ಜಿಲ್ಲಾಪೊಲೀಸ್ ವರಿಷ್ಠಾಧಿಕಾರಿ ದಿವ್ಯಾಗೋಪಿನಾಥ್ ರವರಿಗೆ ದೂರವಾಣಿ ಕರೆ, ಲಿಖಿತ ದೂರಗಳನ್ನು ಸಲ್ಲಿಸುತ್ತಿರುವುದರಿಂದ ಸದರಿ ಪೊಲೀಸ್ ವರಿಷ್ಠಾಧಿಕಾರಿಯವರು ಮಧುಗಿರಿ ಹಾಗೂ ಪಾವಗಡ ತಾಲ್ಲೂಕಿನ ರಕ್ಷಣಾ ಸಿಬ್ಬಂದಿಯವರಿಗೆ ಖಡಕ್ ಸೂಚನೆ ನೀಡಿರುವುದರಿಂದ ಎಚ್ಚೆತ್ತುಕೊಂಡ ಬಡವನಹಳ್ಳಿ ಇನ್ಸ್‌ಪೆಕ್ಟರ್ ರಂಗನಾಥ ರವರು ಡಿ.6 ರಂದು ಬೆಳಿಗ್ಗೆ 9 ಗಂಟೆಯಲ್ಲಿ ರಂಟವಳಲು ಗ್ರಾಮದ ಹೊರವಲಯದ ರಾಮಚಂದ್ರಪ್ಪ ಎನ್ನುವವರ ಜಮೀನಿನ ಬಳಿ ಜೂಜಾಟ ನಡೆಯುತ್ತಿರುವ ಖಚಿತ ಮಾಹಿತಿ ಮೇರೆಗೆ ಜೂಜು ಕೇಂದ್ರದ ಮೇಲೆ ಹಠಾತ್ ದಾಳಿ ನಡೆಸಿ ಜೂಜಾಟದಲ್ಲಿ ತೊಡಗಿದ್ದ ಎಂಟು ಜನರನ್ನು ಬಂಧಿಸಿದ್ದು ಬಂಧಿತರಿಂದ 5400-00 ರೂಗಳ ಹಣವನ್ನು ವಶಪಡಿಸಿಕೊಂಡಿದ್ದು ಪ್ರಕರಣ ದಾಖಲಿಸಿಕೊಂಡು ಬಂಧಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತಾರೆ.

ಬಡವನಹಳ್ಳಿ ಪೊಲೀಸಿನವರು ದಾಳಿಯ ಸಂದರ್ಭದಲ್ಲಿ ಬಹಳಷ್ಟು ಮಂದಿ ಪರಾರಿಯಾಗಿರುತ್ತಾರೆಂದು, ಸದರಿ ಕೆಲವರು ಪರಾರಿಯಾಗಲು ಇಲ್ಲಿನ ಸಿಬ್ಬಂದಿಯವರ ಪರೋಕ್ಷ ಬೆಂಬಲವಿರುವುದಾಗಿ ತಿಳಿಸಿರುತ್ತಾರೆ.

ದ್ವಿಚಕ್ರ ವಾಹನದಿಂದ ಬಿದ್ದು ಪೆಟ್ಟು

ಮಿಡಿಗೇಶಿ

ಮಧುಗಿರಿಯಿಂದ ಪಾವಗಡಕ್ಕೆ ಹಾದು ಹೋಗುವ ಲೋಕೋಪಯೋಗಿ ಇಲಾಖೆ ರಾಜ್ಯ ಹೆದ್ದಾರಿ ರಸ್ತೆ ಮಿಡಿಗೇಶಿಯ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರ ಮುಂಭಾಗ ಸಾಯಕಾಂಲ ಸಮಯ 7-10 ರಲ್ಲಿ ನೆಲಮಂಗಲದ ಪುನಿತ್ ಹಾಗೂ ಕುಮಾರ ಎನ್ನುವವರು ತಮ್ಮ ದ್ವಿಚಕ್ರವಾಹನ ಕೆ.ಎ.04 ಜೆಕೆ 7187 ದಲ್ಲಿ ಪಾವಗಡಕ್ಕೆ ಹೋಗುತ್ತಿರುವಾಗ ದಿಢೀರನೆ ದ್ವಿಚಕ್ರವಾಹನಕ್ಕೆ ನಾಯಿ ಅಡ್ಡ ಬಂದ ಪರಿಣಾಮದಿಂದ ದ್ವಿಚಕ್ರ ಸವಾರರಿಬ್ಬರು ಬಿದ್ದು ಗಾಯಗಳಾಗಿರುತ್ತದೆ. ಪುನಿತ್ (24)ನ ಹೆಚ್ಚಿನ ಪೆಟ್ಟುಗಳಾಗಿರುತ್ತವೆ. ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಪ್ರಥಮ ಚಿಕಿತ್ಸೆ ಪಡೆದು ಚಿಕಿತ್ಸೆಗೆ ಇಲ್ಲಿ ಆಂಬುಲೆನ್ಸ್ ವ್ಯವಸ್ಥೆ ಹಾಗೂ ರಾತ್ರಿ ಸಮಯದಲ್ಲಿ ವೈದ್ಯರ ಕೊರತೆಯಿರುವುದರಿಂದ ಖಾಸಗಿ ವಾಹನದಲ್ಲಿ ತಾಲ್ಲೂಕು ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಅಂಬೇಡ್ಕರ್ ತತ್ವಾದರ್ಶ ಅಳವಡಿಸಿಕೊಳ್ಳಲು ಕರೆ

ಗುಬ್ಬಿ

ದೇಶದ ಹಿಂದುಳಿದ ಸಮುದಾಯಗಳಿಗೆ ಸಾಮಾಜಿಕ ಸಮಾನತೆ ಕಲ್ಪಿಸುವುದರ ಜೊತೆಗೆ ಸಂವಿಧಾನವನ್ನು ರಚಿಸಿ ಇಡೀ ವಿಶ್ವಕ್ಕೆ ಬೆಳಕು ಚಲ್ಲಿದ ಮಹಾನ್ ಚೇತನ ಡಾ:ಬಿ.ಆರ್.ಅಂಬೇಡ್ಕರ್ ಅವರ ತತ್ವಾದರ್ಶಗಳನ್ನು ಸಾಮಾಜಿಕ ಬದುಕಿನಲ್ಲಿ ಅಳವಡಿಸಿಕೊಂಡಾಗ ಮಾತ್ರ ಸುಸಂಸ್ಕೃತ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದು ಜಿಲ್ಲಾ ಕಾಂಗ್ರೆಸ್ ಎಸ್.ಸಿ.ಘಟಕದ ಅಧ್ಯಕ್ಷ ಲಿಂಗರಾಜು ತಿಳಿಸಿದರು.

ಪಟ್ಟಣದ ಕಾಂಗ್ರೆಸ್ ಭವನದ ಮುಂಭಾಗದಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಏರ್ಪಡಿಸಿದ್ದ ಸಂವಿಧಾನ ಶಿಲ್ಪಿ ಡಾ:ಬಿ.ಆರ್. ಅಂಬೇಡ್ಕರ್ ಮಹಾ ಪರಿನಿರ್ವಾಣ ದಿನ ಆಚರಣೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ಹಿಂದುಳಿದ ವರ್ಗಗಳ ಸರ್ವತೋಮುಖ ಪ್ರಗತಿಗೆ ಹಲವಾರು ಮಹತ್ವದ ಯೋಜನೆಗಳನ್ನು ರೂಪಿಸಿ ಆ ಸಮುದಾಯಗಳ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ದೊರಕಿಸಿಕೊಡುವಲ್ಲಿ ಅಂಬೇಡ್ಕರ್ ಮಹತ್ವದ ಸಾಧನೆ ಮಾಡಿದ್ದಾರೆ ಎಂದರು.

ಸಂವಿಧಾನದ ಆಶಯದಂತೆ ದೇಶದ ಹಿಂದುಳಿದ ವರ್ಗಗಳ ಸರ್ವಾಂಗೀಣ ಅಭಿವೃದ್ಧಿ ಸಾಧ್ಯವಾಗಿದೆ. ಹಿಂದಿನ ಪರಿಸ್ಥಿತಿಯನ್ನು ಅವಲೋಕಿಸಿದಾಗ ಇವತ್ತಿನ ದಿನಮಾನಗಳಲ್ಲಿ ಮಹತ್ತರ ಬದಲಾವಣೆಗಳಾಗಿವೆ. ಇಂತಹ ಬದಲಾವಣೆಗಳಿಗೆ ಕಾರಣ ಡಾ:ಅಂಬೇಡ್ಕರ್ ನೀಡಿದ ಸಂವಿಧಾನದಿಂದಾಗಿದೆ. ಮನುಷ್ಯನಿಗೆ ಬಡತನ ಮುಖ್ಯವಲ್ಲ ಸಾಧಿಸುವ ಛಲವೊಂದಿದ್ದರೆ ಸಾಧಿಸಲಾಗದ ವಿಷಯವೆ ಇಲ್ಲ ಎಂದು ಅಂಬೇಡ್ಕರ್ ನಮಗೆ ದಾರಿದೀಪವಾಗಿದ್ದಾರೆ ಎಂದರು.

ಕಾಂಗ್ರೆಸ್ ಮುಖಂಡ ಪ್ರಸನ್ನ ಕುಮಾರ್ ಮಾತನಾಡಿ ಭಾರತ ದೇಶದ ಸಂವಿಧಾನವನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಗುರುತಿಸುವಂತಹ ಮಹತ್ವದ ಕಾರ್ಯವನ್ನು ಸಂವಿಧಾನ ಶಿಲ್ಪಿ ಡಾ:ಬಿ.ಆರ್.ಅಂಬೇಡ್ಕರ್ ಮಾಡಿದ್ದಾರೆ. ಅವರ ಸಾಮಾಜಿಕ ಪರಿಕಲ್ಪನೆ ಮತ್ತು ದೇಶದ ಹಿಂದುಳಿದ ವರ್ಗಗಳಿಗೆ ಸಾಮಾಜಿಕ ಸಮಾನತೆಯನ್ನು ಕಲ್ಪಿಸುವಲ್ಲಿ ಮಹತ್ವದ ಕೊಡುಗೆ ನೀಡಿದ್ದಾರೆ ಎಂದ ಅವರು, ಪ್ರಪಂಚದಲ್ಲಿ ಅತ್ಯಂತ ಬುದ್ದಿವಂತ ವ್ಯಕ್ತಿ ಎಂದು ಲಂಡನ್‌ನ ವಿಶ್ವವಿದ್ಯಾಲಯ ಮಾಹಿತಿಯನ್ನು ನೀಡಿದೆ. ಅಂತಹ ವ್ಯಕ್ತಿಯನ್ನು ನಮ್ಮ ದೇಶದವರು ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆಯಾಗುತ್ತದೆ. ಇಂತಹ ಮೇರು ವ್ಯಕ್ತಿತ್ವವನ್ನು ಹೊಂದಿರುವ ಡಾ:ಬಿ.ಆರ್.ಅಂಬೇಡ್ಕರ್ ಅವರ ಕೊಡುಗೆಗಳನ್ನು ದೇಶದ ಪ್ರತಿಯೊಬ್ಬರೂ ಸಾಮಾಜಿಕ ಬದುಕಿನಲ್ಲಿ ಅಳವಡಿಸಿಕೊಂಡಾಗ ಆದರ್ಶ ಸಮಾಜ ನಿರ್ಮಾಣ ಮಾಡಲು ಸಾಧ್ಯವಾಗುತ್ತದೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾಂಗ್ರೆಸ್‌ನ ಎಸ್ಸಿ ಘಟಕದ ಉಪಾಧ್ಯಕ್ಷ ಹನುಮಂತರಾಯಪ್ಪ, ಗುಬ್ಬಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸುರುಗೇನಹಳ್ಳಿ ನರಸಿಂಹಯ್ಯ, ನಿಟ್ಟೂರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಿಂಬೆಕಟ್ಟೆ ಜಯಣ್ಣ, ಮದ್ಯಪಾನ ಸಂಯಮ ಮಂಡಳಿ ಮಾಜಿ ಅಧ್ಯಕ್ಷ ಎಂ.ಆರ್. ರಂಗಸ್ವಾಮಯ್ಯ, ಕಾಂಗ್ರೆಸ್ ಮುಖಂಡರಾದ ಶಂಕರಾನಂದ, ಡಾ:ಕೆ.ಕುಮಾರ್, ಸಿ.ಆರ್. ಚಿಕ್ಕರಂಗಣ್ಣ, ಕೆ.ಟಿ.ರಂಗಸ್ವಾಮಿ, ಬಿ.ಆರ್ .ಭರತ್‌ಗೌಡ, ಕೆ.ಎಂ.ನೇತ್ರಾವತಿ, ಗಂಗಾಧರ್, ಚನ್ನಿಗರಾಮಯ್ಯ, ಯೋಗೀಶ್, ಶಿವಣ್ಣ, ಕೆಂಪಣ್ಣ, ಜಯರಾಮ್‌ಗೌಡ, ದಲಿತ ಸಂಘಟನೆಯ ಪದಾಧಿಕಾರಿಗಳು ಹಾಗೂ ಕಾಂಗ್ರೆಸ್ ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು.

ಪ್ರಗತಿ TV ಇಂದಿನ ಕಾರ್ಯಕ್ರಮಗಳು

ಬೆಳಗ್ಗೆ
06 : 00 - ಭಕ್ತಿ ಸುಧೆ
06 : 30 - ಜ್ಞಾನ ಸಿಂಧು
07 : 00 - ನಮ್ಮೂರ ದೇಗುಲ
07 : 30 - ಆಹಾರ ಸೂತ್ರ
08 : 00 - ಪ್ರಗತಿ ನ್ಯೂಸ್
08 :30 - ಥೋಟು ಸಿನಿಮಾ
09 : 00 - ಕಾಲ್ ಮಾಡಿ ವಿಶ್ ಮಾಡಿ
10 : 00 - ಆಶಾ ಕಿರಣ
11:00 - ಆಯುಷ್ಮಾನ್‌ಭವ
11 :30 - ಲಕ್ಕಿ ಲೇಡಿ (ನೇರಪ್ರಸಾರ)
12 : 30 - ಕಿರಿಕ್ ಪಾರ್ಟಿ
ಮಧ್ಯಾಹ್ನ
01 : 00 - ಪ್ರಗತಿ ನ್ಯೂಸ್
01 : 30 - ಶಾರ್ಟ್‌ಕಟ್
02 : 00 - ಮಾತಿನ ಮಂಟಪ
03 : 00 - ಪ್ರೇಟಿವುಮನ್
04 : 00 - ಸವಿ ಸವಿ ನೆನಪು
04 : 30 - ಥೋಟು ಸಿನಿಮಾ
ಸಂಜೆ
05 : 00 - ಪ್ರಗತಿ ನ್ಯೂಸ್
05 : 30 - ಸ್ವಲ್ಪ ಡಿಫರೆಂಟ್
06 : 00 - ಜಸ್ಟ್ ಮಾತ್ ಮಾತಲ್ಲಿ (ನೇರಪ್ರಸಾರ)
07 : 00 - ನಾವು ನಮ್ಮ ಕಾನೂನು
08 : 00 - ಪ್ರಗತಿ ಪ್ರೈಂ ಟೈಂ
ರಾತ್ರಿ
09 :00 - ಬಿಗ್ ಬ್ಯಾಂಗ್‌ಬೂಮ್
09 : 30 - ಸವಿ ಸವಿ ನೆನಪು
10 : 00 - ಪ್ರಗತಿ ನ್ಯೂಸ್
11 : 00 - ಪ್ರಗತಿ ಟಾಕೀಸ್

ಚಾನಲ್ ಮಾಹಿತಿ :
ಇ-ಡಿಜಿಟಲ್ ಸೆಟ್‌ಆಪ್ ಬಾಕ್ಸ್‌ನಲ್ಲಿ 482 : ವಿವರಗಳಿಗೆ ಸಮೀಪದ ಕೇಬಲ್ ಆಪರೇಟರ್‌ಗಳನ್ನು ಸಂಪರ್ಕಿಸಿ.
ನಮ್ಮ ವಾಹಿನಿಯ ನ್ಯೂಸ್ ಬುಲೆಟಿನ್ ಮತ್ತು ಕಾರ್ಯಕ್ರಮಗಳನ್ನು ಯೂಟ್ಯೂಬ್‌ನಲ್ಲಿ ನೋಡಬಹುದು.
youtube : www.youtube.com/Pragathi TV Official
Facebook link : www.facebook.com/PragathiTV

ಅಂಬೇಡ್ಕರ್ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಿದ್ದರು

ಚಿಕ್ಕನಾಯಕನಹಳ್ಳಿ

> ನಮಗೆ ಹಕ್ಕು ಹಾಗೂ ಕರ್ತವ್ಯಗಳನ್ನು ತಿಳಿಸಿದವರು ಅಂಬೇಡ್ಕರ್. ಇವರು 1956 ಡಿಸೆಂಬರ್ 6 ರಂದು ಇಹಲೋಕ ತ್ಯಜಿಸಿದರು. ಶತಮಾನಗಳಿಂದ ಮನುವಾದಿಗಳ ಕುತಂತ್ರಗಳಿಂದ ನಲುಗಿದ್ದವರನ್ನು ಮೇಲೆತ್ತಲು ಪ್ರಯತ್ನಿಸಿದ ಇವರು ಅಸ್ಪೃಶ್ಯತೆಯನ್ನು ಮೆಟ್ಟಿನಿಂತವರು. ಶಿಕ್ಷಣದ ಹಕ್ಕನ್ನು ಎಲ್ಲರಿಗೂ ಸಿಗುವಂತೆ ಮಾಡಿ, ಭಗವತ್ ಗೀತೆಯ ರೂಪದಲ್ಲಿ ಭಾರತಕ್ಕೆ ಸಂವಿಧಾನವನ್ನು ನೀಡುವ ಮೂಲಕ ಸಮಾನತೆಯನ್ನು ಸಾರಿದವರು. ಅದೇ ರೀತಿ ಕರ್ನಾಟಕದ ಅಂಬೇಡ್ಕರ್ ಎಂದೇ ಕರೆಯಲ್ಪಡುವ ಪ್ರೊ.ಕೃಷ್ಣಪ್ಪನವರನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯ.
>
> ■ **ಸಿ.ಡಿ.ಚಂದ್ರಶೇಖರ್,** ಪುರಸಭಾಧ್ಯಕ್ಷ

ಡಾ.ಅಂಬೇಡ್ಕರ್ ರವರು ಹರಿದ ಕೋಟನ್ನಾದರೂ ತೊಡು, ಒಳ್ಳೆಯ ಪುಸ್ತಕಗಳನ್ನು ಓದು ಎನ್ನುವ ಮೂಲಕ ತಮ್ಮ ಪುಸ್ತಕ ಪ್ರೇಮವನ್ನು ತೋರಿಸಿದ್ದರು. ಈ ಮೂಲಕ ಶಿಕ್ಷಣಕ್ಕೆ ವಿಶೇಷ ಒತ್ತು ನೀಡಿದ್ದರು. ಬುದ್ದ, ಕಬೀರ, ಜ್ಯೋತಿ ಬಾಪುಲೆ ಇವರುಗಳನ್ನು ತಮ್ಮ ಗುರುವಾಗಿಸಿಕೊಂಡಿದ್ದರು ಎಂದು ತುಮಕೂರಿನ ಸಾರ್ವಜನಿಕ ಶಿಕ್ಷಣ ಇಲಾಖೆಯ ಶಿಕ್ಷಣಾಧಿಕಾರಿ ಎ.ಟಿ ರಂಗದಾಸಪ್ಪ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಪ್ರೌಢಶಾಲೆಯಲ್ಲಿ ದಲಿತ ಸಂಘರ್ಷ ಸಮಿತಿ ಇವರ ಸಂಯುಕ್ತಾಶ್ರಯದಲ್ಲಿ ಏರ್ಪಡಿಸಲಾಗಿದ್ದ ಡಾ.ಬಿ.ಆರ್ ಅಂಬೇಡ್ಕರ್ ಮಹಾ ಪರಿನಿರ್ವಾಣ ಹಾಗೂ ಭಾರತ ಸಂವಿಧಾನ ದಿನಾಚರಣೆಯ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿದ ಅವರು, ಅಂಬೇಡ್ಕರ್‌ರವರು ಶಿಕ್ಷಣವನ್ನೇ ಅಸ್ತ್ರವನ್ನಾಗಿಸಿಕೊಂಡು ಧ್ವನಿ ಇಲ್ಲದವರು ಸಂಘಟಿತರಾಗಿ ಹೋರಾಟವನ್ನು ಮಾಡಬೇಕು ಎಂದು ತಿಳಿಸಿದರು. ಇಂದಿನ ಸಮಾಜದಲ್ಲಿ ದಲಿತರ ಹಾಗೂ ಹಿಂದುಳಿದ ವರ್ಗದವರಿಗೆ ಶಕ್ತಿ ತುಂಬಿದವರು ಡಾ.ಬಿ.ಆರ್ ಅಂಬೇಡ್ಕರ್ ಎಂದರು.

ತಾ.ದಲಿತ ಸಂಘರ್ಷ ಸಮಿತಿಯ ಸಂಚಾಲಕ ಸಿ.ಎಸ್.ಲಿಂಗದೇವರು ಮಾತನಾಡಿ, ಬಾಲ್ಯದಿಂದಲೇ ಅಸ್ಪೃಶ್ಯತೆಯ ಕಹಿಯನ್ನು ಅನುಭವಿಸಿದವರು ಅಂಬೇಡ್ಕರ್. ದೇಶದ ಸಂವಿಧಾನದ ಕರಡನ್ನು ರೂಪಿಸುವ ಮೂಲಕ ರಾಜಕೀಯ, ಸಾಮಾಜಿಕ, ಸರ್ಕಾರಿ ಕ್ಷೇತ್ರಗಳಲ್ಲಿ ಮೀಸಲಾತಿ ತರುವ ಮೂಲಕ ಎಲ್ಲರಿಗೂ ಅವಕಾಶ ಕಲ್ಪಿಸಿದರು. ಇವರ ತತ್ವ ಆದರ್ಶವನ್ನು ಪಾಲಿಸುವ ಹಾಗೂ ಪುಸ್ತಕವನ್ನು ಓದುವ ಗುಣವನ್ನು ವಿದ್ಯಾರ್ಥಿಗಳು ರೂಢಿಸಿಕೊಳ್ಳುವಂತೆ ತಿಳಿಸಿದರು.

ಬಾಪೂಜಿ ವಿದ್ಯಾ ಸಂಸ್ಥೆ ಕಾರ್ಯದರ್ಶಿ ಬೇವಿನಹಳ್ಳಿ ಚೆನ್ನಬಸವಯ್ಯ ಮಾತನಾಡಿ, ಇನ್ನೂ ನಮ್ಮ ಮಧ್ಯೆ ಇರುವಂತಹ ಅಸ್ಪೃಶ್ಯತೆಯನ್ನು ಹೋಗಲಾಡಿಸಲು ನಾವೆಲ್ಲರೂ ಸಂಘಟಿತರಾಗಬೇಕಿದೆ. ಅಂಬೇಡ್ಕರ್‌ರವರ ಕನಸಿನಂತೆ ಶಿಕ್ಷಣ ಮತ್ತು ಆರ್ಥಿಕ ಕ್ಷೇತ್ರದಲ್ಲಿ ನಾವು ಮುಂದೆ ಬರಬೇಕಾಗಿದೆ.ನಮ್ಮಲ್ಲಿರುವಂತಹ ಕೆಟ್ಟ ದುರಭ್ಯಾಸಗಳನ್ನೆಲ್ಲಾ ಬದಿಗಿಟ್ಟು ಶಿಕ್ಷಣವನ್ನು ಕಲಿಯುವ ಮೂಲಕ ಅವರ ಕನಸನ್ನು ನನಸು ಮಾಡಬೇಕಾಗಿದೆ ಎಂದರು.

ಲೇಖಕ ಸಿ.ಗುರುಮೂರ್ತಿ ಕೊಟಿಗೆಮನೆ ಮಾತನಾಡಿ, ವರ್ತಮಾನದ ಎಚ್ಚರಿಕೆ ಹಾಗೂ ಭವಿಷ್ಯದ ಭರವಸೆಯನ್ನು ತಿಳಿದುಕೊಳ್ಳಲು ನಾವು ಅಂಬೇಡ್ಕರ್‌ರವರನ್ನು ಓದಿಕೊಳ್ಳಬೇಕಿದೆ.ಈ ಮೂಲಕ ಅವರ ಚಿಂತನೆಗಳನ್ನು ನಾವು ರೂಢಿಸಿಕೊಳ್ಳಬೇಕು. ಡಾ.ಅಂಬೇಡ್ಕರ್‌ರವರ ತತ್ವ ಆದರ್ಶಗಳನ್ನು ತಿಳಿಯ ಬಯಸುವ ಪ್ರತಿಯೊಬ್ಬರು ಅವರು ರಚಿಸಿರುವ ಜಾತಿ ವಿನಾಶ, ಪ್ರಾಚೀನ ಭಾರತದಲ್ಲಿ ಕ್ರಾಂತಿ ಮತ್ತು ಪ್ರತಿ ಕ್ರಾಂತಿ, ಪ್ರಭುತ್ವ ಮತ್ತು ಅಲ್ಪಸಂಖ್ಯಾತರು ಈ ಮೂರು ಪುಸ್ತಕಗಳನ್ನು ಓದಬೇಕು ಎಂದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿದ ಅಂಬೇಡ್ಕರ್ ಶಾಲೆಯ ಕಾರ್ಯದರ್ಶಿ ಗೋ.ನಿ.ವಸಂತ್ ಕುಮಾರ್, ಇಂದು ಅಂಬೇಡ್ಕರ್‌ರವರನ್ನು ನೆನಪಿಸಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಸಮಾಜದ ದಲಿತ ಹಿಂದುಳಿದ ಹಾಗೂ ಅಲ್ಪ ಸಂಖ್ಯಾತರ ಏಳಿಗೆಗಾಗಿ ಶ್ರಮಿಸಿದ ಅವರು ತಾವು ಅನುಭವಿಸಿದ ಕಹಿ ಅನುಭವಗಳನ್ನು ಯಾರೂ ಅನುಭವಿಸಬಾರದು ಎಂದು ಸಮಾಜದಲ್ಲಿ ಸಮಾನತೆ ಸಾರುವ ದೃಷ್ಟಿಯಿಂದ ಸಂವಿಧಾನದಲ್ಲಿ ಎಲ್ಲರಿಗೂ ಮೀಸಲಾತಿಯನ್ನು ಕಲ್ಪಿಸಿದರು. ಆದರೆ ಇಂದು ಪೇಜಾವರ ಶ್ರೀಗಳಂತವರು ಅಂಬೇಡ್ಕರ್‌ರವರು ರೂಪಿಸಿದ ಸಂವಿಧಾನದ ಬದಲಾವಣೆಯ ಬಗ್ಗೆ ಮಾತನಾಡುತ್ತಿರುವುದು ಸರಿಯಲ್ಲ ಎಂದರು.

ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿ ಸಂಘಟನಾ ಸಂಚಾಲಕ ಆರ್.ಗೋವಿಂದಯ್ಯ, ಸಮಾಜ ಕಲ್ಯಾಣ ಅಧಿಕಾರಿ ಲೋಕೇಶ್ ಮೂರ್ತಿ, ದಲಿತ ಮುಖಂಡ ಮಹದೇವಯ್ಯ, ಶಿಕ್ಷಕರಾದ ದಿನಕರ್, ನರಸಿಂಹಮೂರ್ತಿ ಉಪಸ್ಥಿತರಿದ್ದರು. ಕಾರ್ಯಕ್ರಮದಲ್ಲಿ ಹಾರ್ಮೋನಿಯಂ ಗಂಗಾಧರ್ ಕ್ರಾಂತಿ ಗೀತೆಯನ್ನು ಹಾಡಿದರು. ವಿದ್ಯಾರ್ಥಿನಿ ಅರ್ಷಿತಾ ಮತ್ತು ಸಂಗಡಿಗರು ಪ್ರಾರ್ಥಿಸಿದರು. ಮುಖ್ಯ ಶಿಕ್ಷಕ ಕೆ.ಎನ್ ರಾಮ್‌ಕುಮಾರ್ ಕಾರ್ಯಕ್ರಮ ನಿರೂಪಿಸಿದರು.

ಸಾಮಾಜಿಕ ಜಾಗೃತಿಯಿಂದ ಏಡ್ಸ್ ದೂರಗೊಳಿಸಲು ಕರೆ

ತುಮಕೂರು

ಏಡ್ಸ್ ಒಂದು ಮಾರಕ ಕಾಯಿಲೆಯಾಗಿದ್ದು ಇದರ ಬಗ್ಗೆ ಅಗತ್ಯ ಮುಂಜಾಗ್ರತಾ ಕ್ರಮಕೈಗೊಳ್ಳುವುದರ ಜೊತೆಗೆ ಅದರ ಮಾಹಿತಿ ತಿಳಿದುಕೊಳ್ಳಬೇಕು ಎಂದು ಜಿಲ್ಲಾ ಕ್ಷಯರೋಗ ನಿಯಂತ್ರಣಾಧಿಕಾರಿ ಡಾ. ಸನತ್‌ಕುಮಾರ್ ತಿಳಿಸಿದರು.

ಅವರು ನಗರದ ಹೊರವಲಯದಲ್ಲಿರುವ ಅಕ್ಷಯ ನರ್ಸಿಂಗ್ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ವಿಶ್ವ ಏಡ್ಸ್ ದಿನಾಚರಣೆ ಸಮಾರಂಭದಲ್ಲಿ ಮಾತನಾಡಿ ಪ್ರತಿಯೊಬ್ಬ ಮನುಷ್ಯನಿಗೆ ಆರೋಗ್ಯ ಮುಖ್ಯ. ಆದ್ದರಿಂದ ಇಂತಹ ಕಾಯಿಲೆಗಳಿಂದ ಮುಕ್ತರಾಗಿ ನಾವು ಬದುಕಬೇಕಿದೆ ಎಂದರು.

ಪ್ರಪಂಚದಲ್ಲಿ ಡಿ.1 ಏಡ್ಸ್ ದಿನಾಚರಣೆಯನ್ನು ಏಕಕಾಲದಲ್ಲಿ ಒಂದೇ ದಿನ ಅರಿವು ಕಾರ್ಯಕ್ರಮ ಮಾಡಲಾಗುತ್ತದೆ. ಈ ವಿಚಾರವಾಗಿ ಸಾಮಾಜಿಕ ಜಾಗೃತಿ ಮೂಡಿಸುವುದರ ಮೂಲಕ ಏಡ್ಸ್ ಮುಕ್ತ ದೇಶವನ್ನಾಗಿ ಮಾಡಬೇಕಿದೆ ಎಂದರು.

ಈ ಏಡ್ಸ್‌ಗೆ ಕಾರಣವಾಗುವ ವೈರಸ್ ಎಂಬುದು ಮನುಷ್ಯನ ದೇಹದಲ್ಲಿ ಸೇರಿಕೊಂಡು ಆ ವ್ಯಕ್ತಿ ಬಳಸಿದಂತಹ ಸಿರಿಂಜ್ ಅಥವಾ ಆತನ ರಕ್ತವು ನಮ್ಮ ರಕ್ತದೊಡನೆ ಯಾವುದೇ ಮಾರ್ಗವಾಗಿ ಸೇರಿದರೆ ಅತಿ ವೇಗವಾಗಿ ಹರಡುವ ಸಾಂಕ್ರಾಮಿಕ ರೋಗವಾಗಿದೆ. ಇನ್ನು ಈ ಏಡ್ಸ್ ರೋಗವು ಶೇಕಡ 85 ರಷ್ಟು ಭಾಗ ಅಸುರಕ್ಷಿತ ಲೈಂಗಿಕತೆಯಿಂದ ಬರುತ್ತದೆ. ಇಂತಹ ಕಾಯಿಲೆಗಳ ಪರೀಕ್ಷೆಯನ್ನು ತುಮಕೂರು, ಶಿರಾ, ತಿಪಟೂರಿನ ಕೇಂದ್ರಗಳಲ್ಲಿ ಉಚಿತವಾಗಿ ನೋಡಲಾಗುತ್ತದೆ. ಆದ್ದರಿಂದ ಸಾರ್ವಜನಿಕರು ಇದನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂದರು.

ಕಾಲೇಜಿನ ಚೇರ್ಮನ್ ಡಾ.ಶಿವಕುಮಾರ್ ಮಾತನಾಡಿ ಸುರಕ್ಷತೆಯಿಂದ ಲೈಂಗಿಕ ಕ್ರಿಯೆ ನಡೆಸಿದರೆ ಏಡ್ಸ್ ತಡೆಗಟ್ಟಬಹುದು. ಏಡ್ಸ್ ಕಾಯಿಲೆ ಯುವಕರಿಂದಲ್ಲದೆ ಮುದುಕರಲ್ಲು ಕೂಡ ಕಾಣಬಹುದು. ಇದಕ್ಕೆ ವಯೋಮಿತಿ ಇಲ್ಲ, ಇಂತಹ ಜಾಗೃತಿ ಕಾರ್ಯಕ್ರಮಗಳು ಮಾಡಿದರೆ ಯುವಕರಲ್ಲಿ ಅರಿವು ಮೂಡಿಸಿದಂತಾಗುತ್ತದೆ ಎಂದರು.

ಇದೇ ಸಂದರ್ಭದಲ್ಲಿ ಕಾಲೇಜಿನ ವಿದ್ಯಾರ್ಥಿಗಳಿಂದ ಏಡ್ಸ್ ಬಗ್ಗೆ ಜಾಗೃತಿ ಕಾರ್ಯಕ್ರಮಗಳು ನಡೆಸಿಕೊಡಲಾಯಿತು.

ಈ ಕಾರ್ಯಕ್ರಮದಲ್ಲಿ ಪ್ರಾಂಶುಪಾಲರಾದ ಪವನ್, ಪ್ರೊ. ನರಸರೆಡ್ಡಿ, ರೂಪಶ್ರೀ, ಅಮೃತ, ಉಪಸ್ಥಿತರಿದ್ದರು. ಶಿನಾಮೋಲ್ ಸ್ವಾಗತಿ ವಂದಿಸಿದರು.

ಗ್ರಾಮದ ಸರ್ಕಾರಿ ಜಾಗವನ್ನು ಒತ್ತುವರಿ ಮಾಡಲು ಭೂಗಳ್ಳರ ಸಂಚು

ಕುಣಿಗಲ್

ಗ್ರಾಮಸ್ಥರು ಕಾಯ್ದಿರಿಸಿರುವ ಸರ್ಕಾರಿ ಭೂಮಿಯನ್ನು ಭೂಗಳ್ಳರು ಅಕ್ರಮವಾಗಿ ಒತ್ತುವರಿ ಮಾಡುವ ಮೊದಲು ಅದೇ ಗ್ರಾಮದ ಬಡವರಿಗೆ ಆಶ್ರಯ ಮನೆ ನಿವೇಶನಗಳಿಗಾಗಿ ನೀಡುವಂತೆ ತಹಸೀಲ್ದಾರ್ ಅವರಿಗೆ ನೂರಾರು ಜನ ಮನವಿ ನೀಡಿ ಒತ್ತಾಯಿಸಿದರು.

ಕುಣಿಗಲ್ ತಾಲ್ಲೂಕು ಯಡಿಯೂರು ಹೋಬಳಿಯ ದೇವರಕನ್ನಸಂದ್ರ ಗ್ರಾಮದ ಸರ್ಕಾರಿ ಸರ್ವೆ ನಂ. 16 ರಲ್ಲಿ 29 ಎಕರೆ 06 ಗುಂಟೆ ಸರ್ಕಾರದ ಭೂಮಿ ಇದ್ದು ಅದರಲ್ಲಿ 6 ಎಕರೆ ಜಾಗವನ್ನು ದೇವಸಂದ್ರ ಗ್ರಾಮದ ಗ್ರಾಮಸ್ಥರು ಆಶ್ರಯ ನಿವೇಶನಗಳು, ದೇವಾಲಯ ಹಾಗೂ ಪಾರ್ಕಿಗಾಗಿ ಗ್ರಾಮಸ್ಥರು ಅನೇಕ ವರ್ಷಗಳಿಂದ ಆ ಜಾಗವನ್ನು ಗ್ರಾಮಕ್ಕಾಗಿ ಕಾಯ್ದಿರಿಸಿಕೊಂಡಿರುತ್ತಾರೆ. ಊರಿನಲ್ಲಿ ಅತಿ ಸಣ್ಣ ಬಡಕುಟುಂಬಗಳು ಇರುತ್ತವೆ ಹಾಗೂ ವಾಸಿಸಲು ಯೋಗ್ಯವಾದ ಸ್ಥಳ ಇರುವುದಿಲ್ಲ, ಅತಿಬಡ ಕುಟುಂಬಗಳಿರುವುದರಿಂದ ಗ್ರಾಮಸ್ಥರು ವಾಸಿಸಲು ತೊಂದರೆಯಾಗಿರುತ್ತದೆ. ಆದ ಕಾರಣ ಸ್ಥಳ ಪರಿಶೀಲಿಸಿ ಗ್ರಾಮದ ಬೇಡಿಕೆಯನ್ನು ಈಡೇರಿಸಲು ಒತ್ತಾಯಿಸಿದರು.

ಗ್ರಾಮಸ್ಥರು ಕಾಯ್ದಿರಿಸಿಕೊಂಡಿರುವ ಸರ್ಕಾರದ ಭೂಮಿಯನ್ನು ಭೂಗಳ್ಳರು ಒತ್ತುವರಿ ಮಾಡಿ ಕೊಳ್ಳಲು ಸಂಚು ಮಾಡುತ್ತಿದ್ದಾರೆ. ಆದ ಕಾರಣ ಗ್ರಾಮಸ್ಥರುಗಳಿಗೆ ಆಶ್ರಯ ನಿವೇಶನಗಳನ್ನು ವಿಂಗಡಿಸಿಕೊಳ್ಳಲು ಅನುಮತಿ ಕೊಟ್ಟು ಬಡಕುಟುಂಬಗಳು ಸಣ್ಣ ಸಣ್ಣ ಮನೆಯನ್ನು ನಿರ್ಮಿಸಿಕೊಳ್ಳಲು ಸಹಾಯವಾಗುತ್ತದೆ ಹಾಗೂ ನೆಮ್ಮದಿಯ ಜೀವನ ಸಾಗಿಸಲು ಅನುಕೂಲವಾಗುತ್ತದೆ. ದೇವರಕನ್ನಸಂದ್ರ ಗ್ರಾಮದಲ್ಲಿ ಸುಮಾರು 250 ರಿಂದ 300 ಜನಸಂಖ್ಯೆ ಇದ್ದು ಅಂದರೆ 30 ರಿಂದ 40 ಮನೆಗಳು ಇರುತ್ತವೆ. ಆದ್ದರಿಂದ ಗ್ರಾಮಸ್ಥರುಗಳ ನೆಮ್ಮದಿಗೆ ದಾರಿ ಮಾಡಿಕೊಡಬೇಕೆಂದು ತಹಸೀಲ್ದಾರ್ ನಾಗರಾಜ್ ಅವರಿಗೆ ಒತ್ತಾಯಿಸಿದರು.

ಪ್ರತಿಭಟನೆಯಲ್ಲಿ ಜಯಲಕ್ಷ್ಮಿ, ಸುಮಿತ್ರ, ಇಂದ್ರಮ್ಮ, ಜಯಮ್ಮ, ರಾಜಣ್ಣ, ಮರೀಗೌಡ, ಬೆಟ್ಟೇಗೌಡ, ಚೇತನ, ಮರೀಗೌಡ, ಸುರೇಶ, ಲೋಕೇಶ್, ಪುಟ್ಟಸ್ವಾಮಿ ಮುಂತಾದವರಿದ್ದರು.

ಚೈನ್ ಕಳ್ಳಿ ಪೊಲೀಸರ ವಶಕ್ಕೆ

ಪಾವಗಡ

ಪಟ್ಟಣದ ಬಳ್ಳಾರಿ ರಸ್ತೆಯ ಮಾರ್ಗದಲ್ಲಿರುವ ಶ್ರೀವೆಂಕಟೇಶ್ವರ ಜ್ಯೂವೆಲಸ ಅಂಗಡಿಯಲ್ಲಿ ಬಂಗಾರ ಕೊಳ್ಳುವ ನೆಪದಲ್ಲಿ ಅಸಲಿ ಚೈನ್ ಗೆ ಬದಲಾಗಿ ರೋಲ್ಡ್ ಗೋಲ್ಡ್ ನಕಲಿಯನ್ನು ಇಡಲು ಪ್ರಯತ್ನ ಪಟ್ಟ ಮಹಿಳೆಯನ್ನು ಪಾವಗಡ ಪೊಲೀಸರು ವಶಕ್ಕೆ ಪಡೆದಿದ್ದು, ಮಹಿಳೆಯನ್ನು ಬಳ್ಳಾರಿಯ ಲೀಲಾವತಿ ಎಂದು ಗುರ್ತಿಸಲಾಗಿದ್ದು, ಪೋಲೀಸರು ತೀವ್ರ ವಿಚಾರಣೆ ನಡೆಸುತ್ತಿದ್ದಾರೆ.

ಕೊರಟಗೆರೆಯಲ್ಲಿ ನಡೆದ ಜೆಡಿಎಸ್ ಸಮಾವೇಶಕ್ಕೆ ಆಗಮಿಸಿದ್ದ ಮಾಜಿ ಪ್ರಧಾನಿಗಳಾದ ಹೆಚ್.ಡಿ.ದೇವೇಗೌಡರವರಿಗೆ ಜಿಲ್ಲಾ ಹಾಪ್‌ಕಾಮ್ಸ್ ಅಧ್ಯಕ್ಷರು ಹಾಗೂ ಜೆಡಿಎಸ್ ಜಿಲ್ಲಾ ಉಪಾಧ್ಯಕ್ಷರಾದ ವಿಜಯ್ ಗೌಡರವರು ಪುಷ್ಪಮಾಲೆಯನ್ನು ಹಾಕಿ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕರಾದ ಬಿ.ಸತ್ಯನಾರಾಯಣ, ಕೊರಟಗೆರೆ ಶಾಸಕರಾದ ಸುಧಾಕರ್ ಲಾಲ್, ಜಿಲ್ಲಾ ಯುವ ಜೆಡಿಎಸ್ ಅಧ್ಯಕ್ಷರಾದ ಹಿರೇಹಳ್ಳಿ ಮಹೇಶ್, ಪುಟ್ಟರಾಜು ಹಾಗೂ ಇತರರು ಹಾಜರಿದ್ದರು.

ಹುಳಿಯಾರು 5 ನೇ ಬ್ಲಾಕ್ ಸದಸ್ಯ ದಯಾನಂದ್ ಸದಸ್ಯತ್ವ ರದ್ದು

ಹುಳಿಯಾರು

ಹುಳಿಯಾರು ಗ್ರಾಪಂ ಇತಿಹಾಸದಲ್ಲೇ ಮೊದಲ ಬಾರಿಗೆ ಸದಸ್ಯರ ಸದಸ್ಯತ್ವ ರದ್ದಾದ ಪ್ರಕರಣ ನಡೆದಿದ್ದು ಇಲ್ಲಿನ 5 ನೇ ವಾರ್ಡಿನ ಗ್ರಾಪಂ ಸದಸ್ಯರಾಗಿದ್ದ ಎಸ್.ಎಸ್ .ದಯಾನಂದ್ ಅವರ ಸದಸ್ಯತ್ವವನ್ನು ರದ್ದು ಪಡಿಸಿರುವ ನ್ಯಾಯಾಲಯ ಮರು ಮತ ಎಣಿಕೆ ಮಾಡುವಂತೆ ಆದೇಶಿಸಿದೆ.

2015 ರ ಜೂನ್ 5 ರಂದು ನಡೆದಿದ್ದ ಹುಳಿಯಾರು ಗ್ರಾಮ ಪಂಚಾಯಿತಿ ಚುನಾವಣೆಯ ಐದನೇ ವಾರ್ಡಿನ ಮತ ಎಣಿಕೆ ಸಂದರ್ಭದಲ್ಲಿ ದಯಾನಂದ್ ಹಾಗೂ ಜಹೀರ್ ಸಾಬ್ ಅವರು ಸಮವಾಗಿ 419 ಮತ ಪಡೆದಿದ್ದರು. ಆಗ ವಿಜೇತರನ್ನು ಆಯ್ಕೆ ಮಾಡಲು ಲಾಟರಿ ಪ್ರಕ್ರಿಯೆಯನ್ನು ನಡೆಸಿ

ಲಾಟರಿಯಲ್ಲಿ ದಯಾನಂದ್ ಅವರನ್ನು ವಿಜೇತರನ್ನಾಗಿ ಘೋಷಿಸಲಾಗಿತ್ತು.

ಆದರೆ ಪ್ರತಿಸ್ಪರ್ಧಿ ಜಹೀರ್ ಸಾಬ್ ಅವರು ಅಂಚೆ ಮತದಾನದಲ್ಲಿ ಮೋಸವಾಗಿದೆ ಹಾಗೂ ಎಣಿಕೆ ಸಂದರ್ಭದಲ್ಲಿ 2 ಬ್ಯಾಲೆಟ್ ಪೇಪರ್‌ಗಳನ್ನು ಎಣಿಸಿಲ್ಲ, ಅಲ್ಲದೆ ಲಾಟರಿ ಆಯ್ಕೆಗೆ ನಮ್ಮ ಸಮ್ಮತಿ ಇಲ್ಲದೆ ಏಕಪಕ್ಷೀಯವಾಗಿ ನಮ್ಮ ಅನುಪಸ್ಥಿತಿಯಲ್ಲಿ ಲಾಟರಿ ಮಾಡಲಾಗಿದೆ ಎಂದು ಆರೋಪಿಸಿ ನ್ಯಾಯಾಲಯದ ಮೆಟ್ಟಿಲೇರಿದ್ದರು.

ಸುದೀರ್ಘ ಎರಡೂವರೆ ವರ್ಷಗಳ ವಿಚಾರಣೆ ನಂತರ ಇದೀಗ ನ್ಯಾಯಾಲಯ ತೀರ್ಪು ನೀಡಿದ್ದು ದಯಾನಂದ್ ಅವರ ಸದಸ್ಯತ್ವವನ್ನು ರದ್ದುಪಡಿಸಿ ಮರು ಎಣಿಕೆ ಮಾಡಲು ಆದೇಶ ನೀಡಿದೆ.



16 E.L.E.No.01/17

ORDER

The petition filed by the petitioner is hereby allowed with cost.

It is declared that the declaration made by the 1st respondent that the 2nd respondent has been elected to 5th block Grama panchayath, Huliyar is void and accordingly it is cancelled. Further the respondent No.1 is directed to recount the ballet papers before the court.

(Dictated to the Stenographer, transcribed and computerized by her, corrected and then pronounced by me in the open court on 22nd day of November 2017).

(Kirankumar D. Wadigeri)
Senior Civil Judge & JMFC
Chikkanayakanahalli.

ಹುಳಿಯಾರು ಗ್ರಾಪಂ ಸದಸ್ಯ ದಯಾನಂದ್ ಸದಸ್ಯತ್ವ ರದ್ದು ಮಾಡಿರುವ ನ್ಯಾಯಾಲಯದ ಆದೇಶ ಪ್ರತಿ.

ನ್ಯಾಯಕ್ಕೆ ಸಂದ ಜಯ: ಜಹೀರ್ ಸಾಬ್

ನ್ಯಾಯಾಲಯದ ಈ ತೀರ್ಪು ಸತ್ಯ ಮತ್ತು ನ್ಯಾಯಕ್ಕೆ ಸಂದ ಜಯವಾಗಿದೆ. ಚುನಾವಣಾಧಿಕಾರಿಗಳು ಅಂದು ಮತ ಎಣಿಕೆಯಲ್ಲಿ ಏಕಪಕ್ಷೀಯ ನಿರ್ಧಾರ ಪ್ರದರ್ಶಿಸಿದ್ದರು. ಅಂದೇ ಮರು ಎಣಿಕೆ ಮಾಡುವಂತೆ ಮನವಿ ಮಾಡಿದರೂ ಸಹ ಅವಕಾಶವಿಲ್ಲ ಎಂದು ಸ್ಪಂದಿಸಲಿಲ್ಲ, ಈಗ ನ್ಯಾಯಾಲಯವೇ ಮರು ಎಣಿಕೆಗೆ ಆದೇಶಿಸಿದೆ. ಅಂದು 2 ಮತಪತ್ರಗಳನ್ನು ಬಚ್ಚಿಟ್ಟಿದ್ದರು. ಅಲ್ಲದೆ ಅಂಚೆ ಮತಪತ್ರದಲ್ಲಿ ಸೀಲು ಸಹಿ ಸಹ ಇರುವುದಿಲ್ಲ, ಮರು ಎಣಿಕೆ ಸಂದರ್ಭದಲ್ಲಿ ನೂರಕ್ಕೆ ನೂರು ಜಯ ನನ್ನದೆ.

■ **ಸೈಯದ್ ಜಹೀರ್ ಸಾಬ್,** ಹುಳಿಯಾರು

ಹೈ ಕೋರ್ಟ್ ಮೆಟ್ಟಿಲೇರುವೆ: ದಯಾನಂದ್

ಮತ ಎಣಿಕೆ ಸಂದರ್ಭದಲ್ಲಿ ಅಧಿಕಾರಿಗಳು ಕಾನೂನು ಪಾಲನೆ ಮಾಡಿದ್ದಾರೆ. ನಮ್ಮಿಬ್ಬರಿಗೂ ಸಮಾನ ಮತಗಳು ಬಂದಿದ್ದು ನಿಯಮದಂತೆ ಲಾಟರಿ ಮೂಲಕ ಆಯ್ಕೆ ಮಾಡಿದ್ದಾರೆ. ಎಲ್ಲವೂ ಕಾನೂನು ಬದ್ಧವಾಗಿ ನಡೆದಿರುವುದಕ್ಕೆ ಅಧಿಕಾರಿಗಳು ವೀಡಿಯೋ ಮಾಡಿದ್ದು ಮತ್ತೆ ಮತ ಎಣಿಕೆ ಮಾಡಿದರೂ ಇಬ್ಬರಿಗೂ ಸಮಾನ ಮತಗಳು ಲಭಿಸುತ್ತವೆ. ಅಲ್ಲದೆ ನನ್ನ ಸದಸ್ಯತ್ವ ರದ್ದು ಪ್ರಶ್ನಿಸಿ ಹೈ ಕೋರ್ಟ್ ಮೆಟ್ಟಿಲೇರುತ್ತೇನೆ.

■ **ಎಸ್.ಎಸ್. ದಯಾನಂದ್,**
ಸದಸ್ಯತ್ವ ಕಳೆದುಕೊಂಡವರು.
ಹುಳಿಯಾರು.

ಮಹಿಳೆಯರ ಹೋರಾಟ ಹೆಚ್ಚಿದರೆ ಮದ್ಯಪಾನ ನಿಲ್ಲಿಸಬಹುದು

ಕುಣಿಗಲ್

ರಾಜ್ಯದಲ್ಲಿ ಮಹಿಳೆಯರು ಧ್ವನಿ ಎತ್ತುವ ಮೂಲಕ ಮದ್ಯಪಾನವನ್ನು ನಿಲ್ಲಿಸುವಂತೆ ಹೋರಾಟವನ್ನು ಮಾಡಿದರೆ ಸರ್ಕಾರ ಮದ್ಯಮಾರಾಟವನ್ನು ನಿಲ್ಲಿಸಬಹುದೇ ಹೊರತು ನಮ್ಮ ಮಂಡಳಿಯಿಂದ ಸಾಧ್ಯವಿಲ್ಲ ಎಂದು ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷ ರುದ್ರಯ್ಯ ತಿಳಿಸಿದರು.

ಪಟ್ಟಣದ ತಾ.ಪಂ. ಸಭಾಂಗಣದಲ್ಲಿ ನಡೆದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ಸರ್ಕಾರದ ಈ ಯೋಜನೆಯಡಿ ಹಲವು ಯೋಜನೆಗಳನ್ನು ರೂಪಿಸಿದ್ದು ಮದ್ಯವ್ಯಸನಿಗಳಿಗೆ ಸನ್ಮಾರ್ಗದ ಅರಿವು ಮೂಡಿಸುವುದೇ ಮೂಲ ಉದ್ದೇಶವಾಗಿದೆ.

ಅಲ್ಲದೆ ಮದ್ಯಪಾನ ಸಂಯಮ ಮಂಡಳಿಯ ಯೋಜನೆಗಳ ಅನುಷ್ಠಾನದ ಬಗ್ಗೆ ಹಾಗೂ ಕಾರ್ಯಕ್ರಮದ ಬಗ್ಗೆ ಮಂಡಿಸುವಂತೆ ಗ್ರಾ.ಪಂ. ಪಿ.ಡಿ.ಓ ಸೇರಿದಂತೆ ಹಲವು ಅಧಿಕಾರಿಗಳನ್ನು ಕೇಳಿದರು. ಆದರೆ ಅಧಿಕಾರಿಗಳು ಇದ್ಯಾವುದೋ ಹೊಸ ಯೋಜನೆ ತಿಳಿದೇ ಇಲ್ಲ ಎಂಬ ಉತ್ತರವನ್ನು ನೀಡಿದ್ದರಿಂದ ಈ ಮದ್ಯಪಾನ ಸಂಯಮ ಮಂಡಳಿಯ ಧ್ಯೇಯೋದ್ದೇಶಗಳನ್ನು ಮುಂದಿನ ದಿನಗಳಲ್ಲಿ ತಾಲ್ಲೂಕು ಮಟ್ಟದ ಸಭೆಯನ್ನು ಹಮ್ಮಿಕೊಂಡು ಅಂತಹ ಸಭೆಯಲ್ಲಿ ಅರಿವು ಮೂಡಿಸುವ ಮೂಲಕ ಉತ್ತಮ ರೂಪುರೇಷೆಗಳನ್ನು ಹಮ್ಮಿಕೊಳ್ಳೋಣ. ಅದಕ್ಕೆ ಎಲ್ಲರ ಸಹಕಾರ ಅಗತ್ಯವಾಗಿ ಬೇಕು ಎಂದ ಅವರು, ಕುಡಿಯುವುದನ್ನ ನಿಲ್ಲಿಸಿ ಎಂದು ಹೇಳುವ ಕೆಲಸ ನಮ್ಮದಲ್ಲ, ಕುಡಿದು ಅನಾಹುತ ಆದರೆ ಅಂತಹವರಿಗೆ ಮಾರ್ಗದರ್ಶನ ನೀಡುವುದು ಹಾಗೂ ಸಂಪೂರ್ಣ ಕುಡಿತಕ್ಕೆ ದಾಸನಾದವನಿಗೆ ಉತ್ತಮ ರೀತಿಯಲ್ಲಿ ಅವನ ಜೀನವದ ಕಲೆಯನ್ನು ರೂಪಿಸುವುದಾಗಿದೆ.

ಆದ್ದರಿಂದ ಬಹುತೇಕರು ಈ ಮಂಡಳಿ ಮದ್ಯಪಾನ ಮಾಡುವವರ ವಿರೋಧ ಎಂಬ ಭಾವನೆ ಇದೆ. ಈ ಮಂಡಳಿ ಇಂದ ಮದ್ಯವ್ಯಸನಿಗಳ ಆರೋಗ್ಯಕ್ಕೆ ಸ್ಪಂದಿಸಿ ಆತನ ಕುಟುಂಬಕ್ಕೆ ನೆರವಾಗುವುದು. ಆ ಮೂಲಕ ಅರಿವು ಮೂಡಿಸುವ ಯೋಜನೆಗಳನ್ನು ಹಾಕಿಕೊಂಡು ಬೀದಿ ನಾಟಕ, ಸಾಕ್ಷ್ಯಚಿತ್ರ ಮಾಡಿಸುತ್ತಾ ಬರಲಾಗಿದೆ ಎಂದರು. ಮುಂದಿನ ದಿನಗಳಲ್ಲಿ ಗ್ರಾಮೀಣ ಪ್ರದೇಶದಲ್ಲಿ ಅರಿವು ಮೂಡಿಸುವುದು ಅಗತ್ಯವಾಗಿದೆ. ಆದರೆ ಮಹಿಳೆಯರು ತಮ್ಮ ಕುಡುಕ ಗಂಡನನ್ನು ಓಲೈಸುವ ಮೂಲಕ ಮರೆ ಮಾಚುತ್ತಿರುವುದು ಒಂದು ಕಡೆ ಸಮಾಜಕ್ಕೆ ಆಘಾತವನ್ನುಂಟು ಮಾಡಿದೆ. ಮಹಿಳೆಯರು ಕುಡಿತವನ್ನು ಬಿಡಿಸುವ ನಿಟ್ಟಿನಲ್ಲಿ ಸಿಡಿದೇಳುವ ಮೂಲಕ ಮದ್ಯಪಾನವನ್ನು ನಿಷೇಧಿಸುವಂತೆ ಹೋರಾಟಗಳನ್ನು ಮಾಡಿದರೆ, ಹೋರಾಟವನ್ನು ಪರಿಗಣಿಸಿ ಸರ್ಕಾರ ಮದ್ಯಪಾನವನ್ನು ಬಿಹಾರ ಮಾದರಿಯಲ್ಲಿ ನಿಲ್ಲಿಸಬಹುದೆಂದರು. ಇದೇ ಸಂದರ್ಭದಲ್ಲಿ ಗಾಂಧೀಜಿಯವರ ಭಾವಚಿತ್ರವನ್ನು ತಾಲ್ಲೂಕು ಆಡಳಿತಕ್ಕೆ ನೀಡಿ ಮುಂದೆ ಮಂಡಳಿಯ ಯೋಜನೆಗಳನ್ನು ಅನುಷ್ಠಾನಗೊಳಿಸುವಂತೆ ಸೂಚಿಸಿದರು.

ತಹಸೀಲ್ದಾರ್ ನಾಗರಾಜು, ಇ.ಓ. ನಾರಾಯಣಸ್ವಾಮಿ, ಪಿ.ಎಸ್.ಐ. ಪುಟ್ಟೇಗೌಡ ಸೇರಿದಂತೆ ಹಲವು ತಾಲ್ಲೂಕು ಅಧಿಕಾರಿಗಳು ಹಾಜರಿದ್ದರು.